ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **2/2022**

| | | |
|---|---|---|
| ಹೆಸರು | ಧನರಾಜ್ ಡಿ.ಪಿ. | ಸಿ.ಡಬ್ಲ್ಯೂ21 |
| ತಂದೆಯ ಹೆಸರು | ಪುಟ್ಟೇಗೌಡ | ಪಿ.ಡಬ್ಲ್ಯೂ6 |
| ವಯಸ್ಸು | 44 ವರ್ಷ | |
| ಉದ್ಯೋಗ | ಪಿ ಐ ಕೃಷ್ಣರಾಜನಗರ ಪೋಲೀಸ್ ಠಾಣೆ ಮೈಸೂರು | |
| ವಾಸ ಸ್ಥಳ | ಮೈಸೂರು | |

ಸಾಕ್ಷಿಗೆ ದಿನಾಂಕಃ **05.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .

ಏಪ್ರಿಲ್ 2020 ರಿಂದ ಫೆಬ್ರುವರಿ 2022 ರವರೆಗೆ ನಾನು ಮಳವಳ್ಳಿ ಗ್ರಾಮಾಂತರ ವೃತ್ತದ ಸಿ ಪಿ ಐ ಅಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿ: 25.09.2021 ರಂದು ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಕೆಎ-01-ಎಂಡಿ-3918 ನಂಬರ್ ನ ವಾಹನದ ಮಾಲೀಕರಿಗೆ ಕಲಂ 133 ರಂತೆ ನೋಟೀಸ್ ಜಾರಿ ಮಾಡಿ, ಉತ್ತರ ಪಡೆದಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 8 ಮತ್ತು 9 ಎಂಥು ಸಾಕ್ಷಿಯ ಸಹಿಯನ್ನು ನಿಪಿ 8 ಎ ಮತ್ತು 9 ಎ ಎಂಥು ಗುರುತಿಸಲಾಯಿತು. ಅದೇ ದಿನ ಆರೋಪಿಗೆ ನೋಟೀಸ್ ಜಾರಿ ಮಾಡಿ ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ದಿ: 24.10.2021 ರಂದು ಮೃತ ಪಿ.ಎಂ. ವರದಿಯನ್ನು ಸ್ವೀಕರಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 10 ಎಂಥು ಸಾಕ್ಷಿಯ ಸಹಿಯನ್ನು ನಿಪಿ 10 ಎ ಎಂಥು ಗುರುತಿಸಲಾಯಿತು. ಗಾಯಾಳು ಚಾಸಾ 2 ರವರ ಗಾಯದ ಪ್ರಮಾಣ ಪತ್ರ ಮತ್ತು ಎಂ.ಎಲ್.ಸಿ. ಉತಾರವನ್ನು ಸ್ವೀಕರಿಸಿರುತ್ತೇನೆ. ಸದರಿ ದಾಖಲೆಗಳನ್ನು ನಿಪಿ 11 ಮತ್ತು 12 ಎಂಥು ಸಾಕ್ಷಿಯ ಸಹಿಗಳನ್ನು ನಿಪಿ 11 ಎ ಮತ್ತು 12 ಎ ಎಂಥು ಗುರುತಿಸಲಾಯಿತು.

3. ಅದೇ ದಿನ ಐ.ಎಂ.ವಿ ವರದಿಯನ್ನು ಸ್ವೀಕರಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 13 ಎಂಥು ಸಾಕ್ಷಿಯ ಸಹಿಯನ್ನು ನಿಪಿ 13 ಎ ಎಂಥು ಗುರುತಿಸಲಾಯಿತು. ನಂತರ ತನಿಖಾ

ಕಾಲದಲ್ಲಿ ಚಾಸಾ 2 ರಿಂದ 4 ಮತ್ತು 13 ರವರ ಹೇಳಿಕೆಗಳನ್ನು ದಾಖಲು ಮಾಡಿರುತ್ತೇನೆ. ವಾಹನದ ಮಾಲೀಕರಿಂದ ಇಂಡಿಮ್ನಿಟಿ ಬಾಂಡ್ ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 14 ಎಂಧು ಸಾಕ್ಷಿಯ ಸಹಿಯನ್ನು ನಿಪಿ 14 ಎ ಎಂಧು ಗುರುತಿಸಲಾಯಿತು. ತನಿಖೆ ಪೂರೈಸಿ ಅರೋಪಿಗಳ ವಿರುದ್ದ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಃ ಶ್ರೀ ಎಸ್.ವಿ.ಎಸ್. ವಕೀಲರಿಂದಃ</u>

ನಿಪಿ 2 ರ ಸಾಕ್ಷಿದಾರರು ಸ್ಥಳೀಯರಲ್ಲ ಎಂದರೆ ಸರಿ. ಅಪಘಾತವಾದ ರಸ್ತೆಯು ಅಪಘಾತ ಕಾಲಕ್ಕೆ ಕಾಮಗಾರಿ ಮುಕ್ತಾಯವಾಗಿರಲಿಲ್ಲ ಎಂದರೆ ಸರಿ. ರಸ್ತೆಯ ಕಾಮಗಾರಿ ಪ್ರಗತಿಯಲ್ಲಿದ್ದ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸೂಚನ ಫಲಕಗಳನ್ನು ಅಳವಡಿಸಿದ್ದ ಬಗ್ಗೆ ಫೋಟೋವನ್ನು ಹಾಜರುಪಡಿಸಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಅಪಘಾತ ಕಾಲಕ್ಕೆ ಅರ್ಧ ಡಾಂಬಾರು ಹಾಕಿ ಉಳಿದ ಅರ್ಧ ಜಾಗವನ್ನು ಅಗೆದಿದ್ದರು ಎಂದರೆ ನಾನು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ. ಆ ರೀತಿ ಅಗೆದಿದ್ದ ಜಾಗ ಡಾಂಬಾರು ರಸ್ತೆಯಿಂದ ಮೂರುವರೆ ಅಡಿ ಕೆಳಗಡೆ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ಡಾಂಬಾರು ರಸ್ತೆ ಪಕ್ಕದಲ್ಲಿ ಮಣ್ಣಿನ ರಸ್ತೆಯನ್ನು ಅಗೆದಿದ್ದ ಬಗ್ಗೆ ಸೂಚನಾ ಫಲಕವನ್ನು ಹಾಕರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಸದರಿ ಸ್ಥಳದಲ್ಲಿ ಬೀದಿ ದೀಪದ ವ್ಯವಸ್ಥೆ ಇರಲಿಲ್ಲ ಎಂದರೆ  ನನಗೆ ಗೊತ್ತಿರುವುದಿಲ್ಲ. ಆರೋಪಿಯು ವಾಹನವನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಬಂದಿದ್ದು,  ಡಾಂಬಾರು ರಸ್ತೆಯ ಕೆಳಗಡೆ ವಾಹನವನ್ನು ಇಳಿಸಿದಾಗ  ಅಗೆದಿರುವುದಿಂದ ಸೂಚನ ಫಲಕ ಇಲ್ಲದ ಕಾರಣ ಕಾಮಗಾರಿ ಮಾಡುತ್ತಿದ್ದವರ ನಿರ್ಲಕ್ಷ್ಯತನದಿಂದ ಈ ಘಟನೆ ಸಂಭವಿಸಿದೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ತನಿಖೇ ಕಾಲಕ್ಕೆ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಿಪಿ 8 ಮತ್ತು 9 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.